**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **16**
ಸಿ.ಡಬ್ಲ್ಯೂ ನಂಃ **18**
ಸಾಕ್ಷಿಯನ್ನು ದಿನಾಂಕಃ **11-09-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಾರೆಪ್ಪ |
| ತಾಯಿಯ ಹೆಸರು | ಃ | ಸಾರೆವ್ವ |
| ವಯಸ್ಸು | ಃ | 26 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ತಿಗರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನಮ್ಮ ಊರಿನವರು ಹಾಗೂ ಊರಿನ ಹಿರಿಯರು. ನಮ್ಮ ಊರಿನಲ್ಲಿ ಫಕೀರೇಶ್ವರ ದೇವಸ್ಥಾನ ಇದೆ. ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ಸಮಯ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯುತ್ತದೆ. 2019 ರಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಫಕೀರೇಶ್ವರ ದೇವಸ್ಥಾನದ ಬಳಿ ಆಯೋಜಿಸಲಾಗಿತ್ತು. ಒಟ್ಟು 25 ಜೋಡಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ 4 ಜೋಡಿ ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿದ್ದರು. ನಮ್ಮ ಜನಾಂಗದವರ ಮದುವೆಗಳನ್ನು ಅಂಬೇಡ್ಕರ ಭವನದಲ್ಲಿ ಮಾಡಿದ್ದೆವು. ಉಳಿದ ಮದುವೆಗಳು ಫಕೀರೇಶ್ವರ ದೇವಸ್ಥಾನದ ಬಳಿ ಆದವು. ನಮ್ಮ ಹಿರಿಯರು ಆರೋಪಿಗಳನ್ನು ಈ ಬಗ್ಗೆ ವಿಚಾರಿಸಿದಾಗ ನಾನು ಅಲ್ಲಿರಲಿಲ್ಲ. ಆರೋಪಿಗಳು ಹಾಗೂ ಹಿರಿಯರ ಮಧ್ಯ ಮಾತುಕತೆಯಾಗಿತ್ತು ಆದರೆ ಅವರು ನನಗೇನೂ ಅಂದಿರಲಿಲ್ಲ. ಹಿರಿಯರಿಗೆ ಏನು ಹೇಳಿದ್ದರು ಗೊತ್ತಿಲ್ಲ. ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈಯ್ದು ಬೆದರಿಕೆ ಹಾಕಿದ ವಿಚಾರ ನನಗೆ ನಂತರ ತಿಳಿದುಬಂದಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಕೋರಿಕೆ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

**2).** ದಿಃ **27-8-2019** ರಂದು ಫಕೀರೇಶ್ವರ ದೇವಸ್ಥಾನದ ಬಳಿ ನಿಮ್ಮ ಜನಾಂಗದವರ ಮದುವೆಗಳನ್ನು ಮಾಡುವುದು ಬೇಡಾ ನಿಮ್ಮ ಓಣಿಯಲ್ಲಿ ಮಾಡಿಕೊಳ್ಳಿ ಎಂದು ಆರೋಪಿಗಳು ನಮಗೆ ತಿಳಿಸಿದ್ದರು ಎಂದರೆ ಸರಿ. ಮದುವೆಯಾದ ನಂತರ ಜಾತ್ರೆಯಲ್ಲಿ ಊಟ ಮಾಡಿ ಎಂದು ಅವರು ಹೇಳಿದರು ಎಂದರೆ ಸರಿ. ಜಾತ್ರೆ ಸಮಯ ಜಗಳ ಮಾಡಿಕೊಳ್ಳುವುದು ಬೇಡಾ ಎಂದು ನಮ್ಮ ಹಿರಿಯರು ಅಂಬೇಡ್ಕರ ಭವನದ ಬಳಿ ಪೆಂಡಲ್ ಹಾಕಿ ಅಲ್ಲಿ **04** ಮದುವೆಗಳನ್ನು ಮಾಡಿದ ನಂತರ ಎಲ್ಲರೂ ಫಕೀರೇಶ್ವರ ಜಾತ್ರೆಯಲ್ಲಿ ಊಟ ಮಾಡಿದೆವು ಎಂದರೆ ಸರಿ.

**3).** ಮಧ್ಯಾಹ್ನ **12** ಗಂಟೆಗೆ ಆರೋಪಿಗಳು ಸಮುದಾಯ ಭವನದ ಬಳಿ ಬಂದಾಗ ಮೊದಲು ಒಂದೇ ಕಡೆ ಮದುವೆ ಆಗಲಿ ಎಂದು ಹೇಳಿ ನಂತರ ಬೇರೆ ಕಡೆ ಮದುವೆ ಮಾಡಿಕೊಳ್ಳಿ ಎಂದು ಯಾಕೆ ಹೇಳಿದ್ದಿರಿ ಎಂದು ನಾವು ಆರೋಪಿಗಳನ್ನು ಕೇಳಿದ್ದೆವು ಎಂದರೆ ಹಿರಿಯರು ಕೇಳಿದ್ದರು ನಾನು ಕೇಳಿರಲಿಲ್ಲ. ಆಗ ಆರೋಪಿಗಳು ಕೆಟ್ಟ ಶಬ್ದಗಳಿಂದ ಬೈಯ್ದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. "ಸದರಿಯವರು ಸಿಟ್ಟಿಗೆ ಬಂದವರೇ ನಮಗೆ ತಡೆದು ನಿಲ್ಲಿಸಿ ಸೂಳೇ ಮಕ್ಕಳೇ ನಾವು ಹೇಳಿದಂತೆ ಕೇಳಿದ್ರೆ ಸರಿ ಇಲ್ಲಾಂದ್ರೆ ನಿಮ್ಮನ್ನು ಹೊಡೆದು ಕೊಂದು ಬಿಡುತ್ತೇವೆ ಅಂತಾ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿದ್ದು ಇರುತ್ತದೆ'' ಎಂದು ನಿಪಿ **14** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ನಾವು ಊರಿನಲ್ಲಿ ಚೆನ್ನಾಗಿದ್ದೇವೆ ಎಂಬ ಕಾರಣಕ್ಕಾಗಿ ಆರೋಪಿಗಳು ಆ ರೀತಿ ಬೈಯ್ದಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

**4).** ನನಗೆ ತಿಳುವಳಿಕೆ ಬಂದಾಗಿನಿಂದಲೂ ಸಾರೆಮ್ಮ ದೇವಸ್ಥಾನದ ಬಳಿಯೇ ನಮ್ಮ ಜನಾಂಗದ ಮದುವೆಗಳನ್ನು ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿ. ಆ ದಿನ ಆರೋಪಿಗಳು ಅಸ್ಪೃಷ್ಯತೆ ಆಚರಣೆ ಮಾಡಿರಲಿಲ್ಲ ಹಾಗೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿದಾರರು ಉತ್ತರಿಸಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ

ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

CFC.R.P.67 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **15**
ಸಿ.ಡಬ್ಲ್ಯೂ ನಂಃ **17**
ಸಾಕ್ಷಿಯನ್ನು ದಿನಾಂಕಃ **11-09-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸುಂಕಪ್ಪ |
| ತಂದೆಯ ಹೆಸರು | ಃ | ಸಣ್ಣಮರಿಯಪ್ಪ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ತಿಗರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನಮ್ಮ ಊರಿನವರು ಹಾಗೂ ಊರಿನ ಯಜಮಾನರು. ನಮ್ಮ ಊರಿನಲ್ಲಿ ಫಕೀರೇಶ್ವರ ದೇವಸ್ಥಾನ ಇದೆ. ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ಸಮಯ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯುತ್ತದೆ. 2019 ರಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಫಕೀರೇಶ್ವರ ದೇವಸ್ಥಾನದ ಬಳಿ ಆಯೋಜಿಸಲಾಗಿತ್ತು. ಒಟ್ಟು 25 ಜೋಡಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ 4 ಜೋಡಿ ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿದ್ದರು. ನಮ್ಮ ಜನಾಂಗದವರ ಮದುವೆಗಳನ್ನು ಅಂಬೇಡ್ಕರ ಭವನದಲ್ಲಿ ಮಾಡಿದ್ದೆವು. ಉಳಿದ ಮದುವೆಗಳು ಫಕೀರೇಶ್ವರ ದೇವಸ್ಥಾನದ ಬಳಿ ಆದವು. ಎಲ್ಲಾ ಮದುವೆಗಳನ್ನು ಕೂಡಿ ಮಾಡೋಣಾ ಎಂದು ಮೊದಲಿಗೆ ಹೇಳಿದ್ದರು ಆದರೆ ಆ ರೀತಿ ಏಕೆ ಮಾಡಲಿಲ್ಲ ಎಂದು ಕೇಳಿದಾಗ ಜಗಳ ಆಯಿತು. ಅಂದಿನಿಂದ ಸಾಮೂಹಿಕ ಮದುವೆಗಳನ್ನು ಮಾಡುತ್ತಿಲ್ಲ. ಆರೋಪಿಗಳು ಏನು ಬೈಯ್ದಿಲ್ಲ ಹಾಗೂ ಬೆದರಿಕೆ ಹಾಕಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಕೋರಿಕೆ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

2). ದಿಃ 27-8-2019 ರಂದು ಫಕೀರೇಶ್ವರ ದೇವಸ್ಥಾನದ ಬಳಿ ನಿಮ್ಮ

ಜನಾಂಗದವರ ಮದುವೆಗಳನ್ನು ಮಾಡುವುದು ಬೇಡಾ ನಿಮ್ಮ ಓಣಿಯಲ್ಲಿ ಮಾಡಿಕೊಳ್ಳಿ ಎಂದು ಆರೋಪಿಗಳು ನಮಗೆ ತಿಳಿಸಿದ್ದರು ಎಂದರೆ ಸರಿ. ನಮ್ಮ ಓಣಿಯಲ್ಲಿ 04 ಮದುವೆಗಳನ್ನು ಮಾಡಿದ ನಂತರ ಎಲ್ಲರೂ ಫಕೀರೇಶ್ವರ ಜಾತ್ರೆಯಲ್ಲಿ ಊಟ ಮಾಡಿದೆವು ಎಂದರೆ ಸರಿ. ಆರೋಪಿಗಳು ಸಮುದಾಯ ಭವನದ ಬಳಿ ಬಂದಾಗ ಮೊದಲು ಒಂದೇ ಕಡೆ ಮದುವೆ ಆಗಲಿ ಎಂದು ಹೇಳಿ ನಂತರ ಬೇರೆ ಕಡೆ ಮದುವೆ ಮಾಡಿಕೊಳ್ಳಿ ಎಂದು ಯಾಕೆ ಹೇಳಿದ್ದಿರಿ ಎಂದು ನಾವು ಆರೋಪಿಗಳನ್ನು ಕೇಳಿದ್ದೆವು ಎಂದರೆ ಸರಿ. ಆಗ ಆರೋಪಿಗಳು ಕೆಟ್ಟ ಶಬ್ದಗಳಿಂದ ಬೈಯ್ದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. "ಸದರಿಯವರು ಸಿಟ್ಟಿಗೆ ಬಂದವರೇ ನಮಗೆ ತಡೆದು ನಿಲ್ಲಿಸಿ ಸೂಳೀ ಮಕ್ಕಳೀ ನಾವು ಹೇಳಿದಂತೆ ಕೇಳಿದ್ರೆ ಸರಿ ಇಲ್ಲಾಂದ್ರೆ ನಿಮ್ಮನ್ನು ಹೊಡೆದು ಕೊಂದು ಬಿಡುತ್ತೇವೆ ಅಂತಾ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿದ್ದು ಇರುತ್ತದೆ'' ಎಂದು <u>ನಿಪಿ 13 ರೀತ್ಯ ಹೇಳಿಕೆ</u> ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆದರೆ ಹೇಳಿಕೆಯನ್ನು ವಿಳಂಬವಾಗಿ ಕೊಟ್ಟಿದ್ದೆ ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ಈಗ ನಾವು ಊರಿನಲ್ಲಿ ಚೆನ್ನಾಗಿದ್ದೇವೆ ಎಂಬ ಕಾರಣಕ್ಕಾಗಿ ಆರೋಪಿಗಳು ಆ ರೀತಿ ಬೈಯ್ದಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ</u>

**3).** ನನಗೆ ತಿಳಿದಾಗಿನಿಂದಲೂ ಸಾರೆಮ್ಮ ದೇವಸ್ಥಾನದ ಬಳಿಯೇ ನಮ್ಮ ಜನಾಂಗದ ಮದುವೆಗಳನ್ನು ಮಾಡಿಕೊಂಡು ಬಂದಿದ್ದೇವೆ ಎಂದರೆ ಅಲ್ಲಿ ಸುಮಾರು 7-8 ಮಾತ್ರ ಮಾಡಿದ್ದೆವು. ಆರೋಪಿಗಳನ್ನು ವಿಚಾರಿಸಲು ನಾವು ಹೋಗಿರಲಿಲ್ಲ ಆದರೆ ಅವರೇ ಸಮುದಾಯ ಭವನದ ಬಳಿ ಬಂದಿದ್ದರು. ನಮ್ಮ ಮದುವೆಗಳನ್ನು ಓಣಿಯಲ್ಲಿ ಮಾಡಿಕೊಳ್ಳಿ ಎಂದು ಆರೋಪಿಗಳು ಹೇಳಿದಾಗ ನಾನು ಇದ್ದೆ. ನಾನು ಆ ಸ್ಥಳದಲ್ಲಿ ಇರದೇ ಇದ್ದರೂ ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಅಸ್ಪೃಷ್ಯತೆ ಆಚರಣೆ ಮಾಡಿ ನಮ್ಮ ಮದುವೆಗಳು ಬೇರೆ ಕಡೆ ಮಾಡಿಕೊಳ್ಳಿ ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**<u>Spl.C(SC/ST).No.: 2/2020</u>**

| Form No.4(Civil)<br>(R.P.No.57) |
|---|

ಪಿ.ಡಬ್ಲ್ಯೂ ನಂಃ **14**
ಸಿ.ಡಬ್ಲ್ಯೂ ನಂಃ **16**
ಸಾಕ್ಷಿಯನ್ನು ದಿನಾಂಕಃ **11-09-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಭರಮಪ್ಪ
ತಂದೆಯ ಹೆಸರು ಃ ದೇವಪ್ಪ
ವಯಸ್ಸು ಃ **29** ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸ ಸ್ಥಳ ಃ ತಿಗರಿ

<u>ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ</u>

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನಮ್ಮ ಊರಿನವರು ಹಾಗೂ ಊರಿನ ಹಿರಿಯರು. ನಮ್ಮ ಊರಿನಲ್ಲಿ ಫಕೀರೇಶ್ವರ ದೇವಸ್ಥಾನ ಇದೆ. ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ಸಮಯ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯುತ್ತದೆ. ದಿಃ **27-8-2019** ರಂದು ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಫಕೀರೇಶ್ವರ ದೇವಸ್ಥಾನದ ಬಳಿ ಆಯೋಜಿಸಲಾಗಿತ್ತು. ಒಟ್ಟು **25** ಜೋಡಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ **4** ಜೋಡಿ ಮಾದಿಗ ಜನಾಂಗಕ್ಕೆ ಸೇರಿದವರಾಗಿದ್ದರು. ನಮ್ಮ ಮದುವೆಗಳನ್ನು ಅಂಬೇಡ್ಕರ ಭವನದಲ್ಲಿ ಮಾಡಿದ್ದೆವು. ಜಾತಿ ಕಾರಣದಿಂದ ನಾವು ಅಲ್ಲಿ ಮದುವೆ ಮಾಡಿದ್ದೆವು. ನಂತರ ಎಲ್ಲರೂ ಸೇರಿ ಜಾತ್ರೆಯಲ್ಲಿ ಊಟ ಮಾಡಿದೆವು.

**2).** ಆರೋಪಿಗಳೊಂದಿಗೆ ನಮ್ಮ ಹಿರಿಯರು ಮಾತನಾಡಿದ್ದರು ಆಗ ನಾನು ಇರಲಿಲ್ಲ. ಆರೋಪಿಗಳು ನನಗೆನೂ ತಿಳಿಸಿರಲಿಲ್ಲ. ಈ ಬಗ್ಗೆ ಗಂಗಾವತಿ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಕೋರಿಕೆ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

**2).** ಆ ದಿನ ಮದುವೆ ಕಾರ್ಯಕ್ರಮ ಮುಗಿದ ನಂತರ ನಮ್ಮ ಮಂದಿಗೆ ಮದುವೆ

ಮಾಡಿದ ಜಾಗಕ್ಕೆ ಆರೋಪಿಗಳು ಬಂದಿದ್ದರು ಎಂದರೆ ಸರಿ. ಮೊದಲು ಒಂದೇ ಕಡೆ ಮದುವೆ ಆಗಲಿ ಎಂದು ಹೇಳಿ ನಂತರ ಬೇರೆ ಕಡೆ ಮದುವೆ ಮಾಡಿಕೊಳ್ಳಿ ಎಂದು ಯಾಕೆ ಹೇಳಿದ್ದಿರಿ ಎಂದು ನಾವು ಆರೋಪಿಗಳನ್ನು ಕೇಳಿದ್ದೆವು ಎಂದರೆ ಸರಿ. ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ನಮ್ಮ ಮದುವೆಗಳು ಏಕೆ ಮಾಡಲು ಅವಕಾಶ ಕೊಡಲಿಲ್ಲ ಎಂದು ನಾವು ಕೇಳಿದ್ದೆವು ಎಂದರೆ ಸರಿ. ಆಗ ಆರೋಪಿಗಳು ಕೆಟ್ಟ ಶಬ್ದಗಳಿಂದ ಬೈಯ್ದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಈ ವಿಚಾರ ತಿಳಿದುಕೊಂಡು ಸಾಮಾಜಿಕ ಕಲ್ಯಾಣ ಇಲಾಖೆ ಅಧಿಕಾರಿಗಳು ದೂರು ಕೊಟ್ಟರು ಎಂದರೆ ಸರಿ. ಆರೋಪಿಗಳು ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈಯ್ದು ಬೆದರಿಕೆ ಹಾಕಿದ್ದರೂ ಸಹಾ ಈಗ ನಾವುಗಳು ರಾಜಿ ಮಾಡಿಕೊಂಡು ಚೆನ್ನಾಗಿ ಇರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. "ಸದರಿಯವರು ಸಿಟ್ಟಿಗೆ ಬಂದವರೇ ನಮಗೆತ ಡೆದು ನಿಲ್ಲಿಸಿ ಸೂಳೇ ಮಕ್ಕಳೇ ನಾವು ಹೇಳಿದಂತೆ ಕೇಳಿದ್ರೆ ಸರಿ ಇಲ್ಲಾಂದ್ರೆ ನಿಮ್ಮನ್ನು ಹೊಡೆದು ಕೊಂದು ಬಿಡುತ್ತೇವೆ ಅಂತಾ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿದ್ದು ಇರುತ್ತದೆ" ಎಂದು ನಿಪಿ 12 ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

**3).** ನನಗೆ ತಿಳಿದಾಗಿನಿಂದಲೂ ಸಾರೆಮ್ಮ ದೇವಸ್ಥಾನದ ಬಳಿಯೇ ನಮ್ಮ ಜನಾಂಗದ ಮದುವೆಗಳನ್ನು ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿ. ನಮ್ಮ ಸಮುದಾಯದ 4 ಮದುವೆಗಳು ನಮ್ಮ ಓಣಿಯಲ್ಲಿರುವ ಸಾರೆಮ್ಮ ದೇವಸ್ಥಾನದ ಬಳಿಯೇ ಮಾಡಲು ನಮ್ಮ ಓಣಿಯ ಹಿರಿಯರು ನಿರ್ಧರಿಸಿದ್ದರು ಎಂದರೆ ಸರಿಯಲ್ಲ. ಹಿರಿಯರು ವಿವಾಹದ ಬಗ್ಗೆ ಮಾತನಾಡಿದ ವಿಚಾರ ನನಗೆ ಗೊತ್ತಿಲ್ಲ. ಆರೋಪಿಗಳು ಸಮುದಾಯ ಭವನದ ಬಳಿ ಬಂದಾಗ ನಾನು ಇದ್ದೆ. ಆದರೆ ಹಿರಿಯರು ಮದುವೆ ವಿಚಾರ ಮಾತನಾಡಲು ಆರೋಪಿಗಳ ಬಳಿ ಹೋದಾಗ ನಾನು ಇರಲಿಲ್ಲ.

**4).** ನಿಮ್ಮ ಜಾತಿ ಬೇರೆ ನೀವು ಇಲ್ಲಿ ಮದುವೆ ಮಾಡಿಕೊಳ್ಳಬೇಡಿ ಎಂದು ಹೇಳಿದ ಕಾರಣ ನಾವು ನಮ್ಮ ಜನಾಂಗದವರ ಮದುವೆಗಳನ್ನು ಓಣಿಯಲ್ಲಿ ಮಾಡಿದೆವು. ಆ ರೀತಿ ಆರೋಪಿಗಳು ಹೇಳಿದಾಗ ನಾನು ಅಲ್ಲಿರಲಿಲ್ಲ. ನನಗೆ ತಿಳುವಳಿಕೆ ಬಂದಾಗಿನಿಂದಲೂ ಸಾರೆಮ್ಮ ದೇವಸ್ಥಾನದ ಬಳಿಯೇ ಮದುವೆಗಳನ್ನು

ಮಾಡುತ್ತಿದ್ದರು. ಗಂಗಾವತಿಯಲ್ಲಿ ನಾನು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ಅವರೇನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ದೂರು ಕೊಟ್ಟಿರುತ್ತಾರೆಂದು ನನಗೆ ಗೊತ್ತಿದೆ. ಆರೋಪಿಗಳು ಅಸ್ಪೃಷ್ಯತೆ ಆಚರಣೆ ಮಾಡಿ ನಮ್ಮ ಮದುವೆಗಳು ಬೇರೆ ಕಡೆ ಮಾಡಿಕೊಳ್ಳಿ ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.